ಶ್ರೀ ಕೆ. ಲಕ್ಕಪ್ಪ.—ಅಷ್ಟು ಜನ ಪಾಸಾಗಿರಬಹುದು. ಆದರೆ ಅನೇಕ ಜನ ಸರ್ಕಾರಿ ಉದ್ಯೋಗ ಬೇಕು ಎಂದು ಮುಂದೆ ಬಾರದೆ ಇರಬಹುದು. ಬೇರೆ ಬೇರೆ ಕೆಲಸಗಳಿಗೆ ಹೋಗಿ ಸೇರಿಕೊಂಡಿರಬಹುದು. ನಮಗೆ ಕೆಲಸಬೇಕೆಂದು ಯಾರು ಸರ್ಕಾರಕ್ಕೆ ಅರ್ಜಿಯನ್ನು ಹಾಕಿಕೊಂಡಿದ್ದಾರೆಯೋ ಅದರ ಆಧಾರದಮೇಲೆ ನಾನು ಇದನ್ನು ಹೇಳಿದ್ದೇನೆ. ಇನ್ನೂ ಜಾಸ್ತಿ ಇರಬಹುದು.

Reinstatement of Conductors by M.S.R.T.C.

236. Sri SIDDAIAH KASHIMATH (Shirahatti).—

Will the Minister for Transport be pleased to state: —

(*a*) the number of bus conductors dismissed so far by M.S.R.T.C. Corporation (Divisionwise figures may be furnished);

(*b*) the number of them reinstated (Divisionwise figures may be furnished);

(*c*) whether there are any Writ Petitions pending in High Court in this connection ?

A.—Sri MOHAMED ALI (Minister for Transport).—

(*a*) 946.

Divisionwise break up is as follows :—

(1) B.T.S. Division	...	86
(2) Bangalore Division	...	48
(3) Hubli Division	...	182
(4) Bellary Division	...	92
(5) Belgaum Division	...	118
(6) Mysore Division	...	51
(7) Bijapur Division	...	57
(8) Gulbarga Division	...	139
(9) North Kanara Division	...	16
(10) Hassan Division	...	157

(*b*) 30.

Divisionwise break up is as follows :—

(1) B.T.S. Division	...	6
(2) Bangalore Division	...	2
(3) Hubli Division	...	5
(4) Bellary Division	...	1
(5) Belgaum Division	...	6
(6) Mysore Division	...	3
(7) Bijapur Division	...	3
(8) Gulbarga Division	...	4
(9) N. K. Division	...	Nil
(10) Hassan Division	...	Nil

(*c*) Yes, 20 Writ Petitions are pending.

ಶ್ರೀ ಸಿದ್ದಯ್ಯ ಕಾಶೀಮಠ.—ಸ್ವಾಮಿ ಈಗ ಮೈನೂರು ರಾಜ್ಯದ ರಸ್ತೆ ಸಾರಿಗೆ ನಿಗಮದಲ್ಲಿ ಕಂಡಕ್ಟರುಗಳನ್ನು ರೀಇನ್‌ಸ್ಟೇಟ್ ಮಾಡುವಾಗ ಯಾವ ಅಂಶವನ್ನು ಗಣನೆಗೆ ತೆಗೆದುಕೊಂಡು ರೀಇನ್‌ಸ್ಟೇಟ್ ಮಾಡುತ್ತಿದ್ದೀರಿ ?

†Sri MOHAMED ALI.—That depends upon the merit of the individual case.

ಶ್ರೀ ಸಿದ್ದಯ್ಯ ಕಾಶೀಮಠ.—ಹುಬ್ಬಳ್ಳಿ ಡಿವಿಜನ್‌ನಲ್ಲಿ 182 ಜನ ಕಂಡಕ್ಟರನ್ನು ಕೆಲಸದಿಂದ ವಜಾ ಮಾಡಲಾಗಿದೆ ಎಂದು ತಿಳಿಸಿದ್ದೀರಿ, ನಮಗೆ ತಿಳಿದಿರುವ ಹಾಗೆ ಅವರು ಬಹಳ ಕಷ್ಟದಲ್ಲಿದ್ದಾರೆ. ಅವರು ನಿಮ್ಮ ಕಾಯಿದೆಗನುಗುಣವಾಗಿ ಬರುವುದಾದರೆ ಅವರನ್ನು ರೀಇನ್‌ಸ್ಟೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri MOHAMED ALI.—Everything depends upon the merit of the case. Sometimes on compassionate grounds even the Road Transport Corporation re-employs these people.

ಶ್ರೀ ಎನ್. ಎ. ಚನ್ನೇಗೌಡ.—ಈಗ ಒಟ್ಟು 946 ಜನಗಳನ್ನು ಕೆಲಸದಿಂದ ತೆಗೆದುಹಾಕಿದ್ದೇವೆ ಎಂದು ಹೇಳಿದ್ದೀರಿ, ಆ ಪೈಕಿ ಎಷ್ಟು ಜನಗಳನ್ನು ಹಣದುರುಪಯೋಗದ ಆಪಾದನೆಗಳ ಮೇರೆ ತೆಗೆದುಹಾಕಿದ್ದೀರಿ ? ಈ ಸಂಬಂಧದಲ್ಲಿ 20 ರಿಟ್ ಪಿಟಿಷನ್‌ಗಳು ಇತ್ಯರ್ಥವಾಗದೇ ಉಳಿದಿವೆ ಎಂದು ಹೇಳಿದ್ದೀರಿ, ಸರ್ಕಾರದ ಇಂಟರೆಸ್ಟಿನಿಂದ ಅವುಗಳನ್ನು ಕಾಂಪೌಂಡ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri MOHAMED ALI.—It is very difficult to give the details of these 946 cases but many of them were involved in pilferage.

ಶ್ರೀ ಬಿ. ಎಂ. ಇದಿನಬ್ಬ.—ಬಸ್ ರೂಟು ನ್ಯಾಷನಲೈಜ್ ಆಗುವುದಕ್ಕಿಂತ ಮೊದಲು ಬೇರೆ ಬೇರೆ ಕಂಪೆನಿಗಳಲ್ಲಿದ್ದಂತಹ ಕಂಡಕ್ಟರುಗಳು ಮತ್ತು ಡ್ರೈವರುಗಳನ್ನು, ಕೆಲಸ ಇಲ್ಲದೆ ಇರುವ ವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ಏರ್ಪಾಡು ಸರ್ಕಾರದ ಕೃತಿಯಲ್ಲಿ ಇದಯೇ ?

Sri MOHAMED ALI.—The Cadre and Recruitment Rules for the Road Transport Corporation have been formulated and the employees of the erstwhile transport undertakings have to fulfil certain conditions. However, if any specific proposals are made to the Government and the Road Transport Corporation, certainly certain concessions will be shown.

Sri M. S. KRISHNAN.—Has it come to the notice of the Government that these rules and standing orders in respect of taking disciplinary action have been violated in quite a number of cases and that is why there are large number of writ petitions pending ?

Sri MOHAMED ALI.—I do not think a large number of writ petitions are pending: only 20 are pending and I can say that compared to the writ petitions filed against other departments, the writ petitions filed against the Road Transport Corporation are very small in number.

ಶ್ರೀಮತಿ ಕೆ. ಲೀಲಾವತಿ ರೈ. —ಸ್ವಾಮಿ ಬಸ್ ರೂಟನ್ನು ನ್ಯಾಷನಲೈಜ್ ಮಾಡುವುದಕ್ಕಿಂತ ಮುಂಚೆ ಪ್ರೈವೇಟ್ ಬಸ್ಸುಗಳಲ್ಲಿ ಕೆಲಸ ಮಾಡಿಕೊಂಡು ಇದ್ದಂತಹ ಡ್ರೈವರುಗಳು ಮತ್ತು ಕಂಡಕ್ಟರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ ರೂಲ್ಸ್ ಫ್ರೇಮ್ ಮಾಡುತ್ತಿದ್ದೇವೆ ಎಂದು ಹೇಳಿದ್ದರು. ಈಗ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

Sri MOHAMED ALI.—It is very difficult to accept all the retrenched employees of the private undertakings.

ಶ್ರೀ ಎಚ್. ಬಿ. ಹಾಲಪ್ಪಯ್ಯ.—ಹಾಸನ ಡಿವಿಜನ್‌ನಲ್ಲಿ 157 ಜನ ಕಂಡಕ್ಟರ್‌ನ್ನು ಡಿಸ್‌ಮಿಸ್ ಮಾಡಿದ್ದಾರೆ. ನಾನು ಅಲ್ಲಿಯ ಎಂಪ್ಲಾಯೀಸ್ ಯೂನಿಯನ್ನಿನ ಅಧ್ಯಕ್ಷನಾಗಿದ್ದೇನೆ. ಈಗ ಡಿಸ್‌ಮಿಸ್ ಆಗಿರತಕ್ಕ 157 ಜನಗಳ ಪೈಕಿ ಒಬ್ಬರೂ ಕೂಡ ಸರ್ಕಾರದ ಮರ್ಸಿಗೆ ಪಾತ್ರರಾಗಲಿಲ್ಲವೇ ?

Sri MOHAMED ALI.—The question of taking a compassionate view and mercy petition is different; this relates to the question of reinstatement.

Upper Krishna Project

237. Sri M. NAGAPPA (Raichur).—

Will the Chief Minister be pleased to state :—

(*a*) whether any additional amount has been sanctioned by Government for the Upper Krishna Project other than the budgetted amount for the year 1968-69;

(*b*) if so, what is the amount sanctioned;

(*c*) whether the District Development Council, Raichur, passed any resolution at its meeting held in the month of July 1968 recommending to take up the construction of the Right Bank Canal (Upper Krishna Project) simultaneously in the first stage work of the project;

(*d*) if so, the action the Government has taken on the said resolution?

A.—Sri VEERENDRA PATIL (Chief Minister).—

(*a*) No.

(*b*) Does not arise in view of reply to (*a*) above.

(*c*) Yes.

(*d*) This will be examined subject to availability of funds.

ಶ್ರೀ ಎಂ. ನಾಗಪ್ಪ—ಇಲ್ಲಿರುವ ಸುಮಾರು 23 ಜನ ಮಾನ್ಯ ಸದಸ್ಯರು ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಕೊಟ್ಟಿರುವ 50 ಲಕ್ಷ ಸಾಲದು, ಇನ್ನೂ ಹೆಚ್ಚು ಹಣ ಕೊಡಬೇಕು ಎಂದು ತಮಗೆ ಒಂದು ಮನವಿ ಕೊಟ್ಟಿದ್ದರೇ ? ಹಾಗೆ ಕೊಟ್ಟಿದ್ದರೆ ಅದರ ಮೇರೆ ಯಾವ ರೀತಿಯಾದ ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

†ಶ್ರೀ ವೀರೇಂದ್ರ ಪಾಟೀಲ್.—ಕೊಟ್ಟಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತಿದ್ದೇನೆ. ಬಹುಶಃ ಎರಡನೇ ಡಿಪಾರ್ಟುಮೆಂಟಿನಲ್ಲಿ ಸ್ವಲ್ಪಮಟ್ಟಿಗೆ ಖರ್ಚನ್ನು ಖೋತಾ ಮಾಡಿ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಹೆಚ್ಚು ಹಣ ಕೊಡಲು ಸಾಧ್ಯವೇ ಎನ್ನುವುದನ್ನು ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಂ. ನಾಗಪ್ಪ—(ಈ)ಗೆ ಉತ್ತರವಾಗಿ "This will be examined subject to availability of funds." ಎಂದು ಹೇಳಿದ್ದೀರಿ.

ಅಪ್ಪರ್ ಕೃಷ್ಣ ರೈಟ್ ಬ್ಯಾಂಕು ಬಳಿ ಇರುವ ಬೆನಿಫಿಷಿಯರೀಸ್‌ಗಳು ಶೇಕಡಾ 25 ರಷ್ಟು ಹಣವನ್ನು ಮೊದಲಗೇ ಕೊಡಲು ಸಿದ್ಧರಿದ್ದರೆ ಇದರ ಜೊತೆಗೆ ಸರಕಾರವೂ ಹಣ ಕೊಟ್ಟು ಬೇಗನೆ ಕಟ್ಟಲು ಸಾಧ್ಯವೇ ?